**ಶ್ರೀ ತನ್ವೀರ್ ಸೇಠ್:** (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ,2005ನೇ ಸಾಲಿನ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇವೆ.

**ಅಧ್ಯಕ್ಷರು:–** ವಿಧೇಯಕವನ್ನು ಮಂಡಿಸಲಾಗಿದೆ.

**3. ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2005**

**ಮಂಡನೆಗೆ ಅನುಮತಿ ಕೋರಿಕೆ**

**ಶ್ರೀ ತನ್ವೀರ್ ಸೇಠ್:** (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 2005ನೇ ಸಾಲಿನ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇವೆ.

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ,

"2005ನೇ ಸಾಲಿನ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

**ಶ್ರೀ ತನ್ವೀರ್ ಸೇಠ್:** (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ,2005ನೇ ಸಾಲಿನ ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು:** ವಿಧೇಯಕವನ್ನು ಮಂಡಿಸಲಾಗಿದೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ಮಾನ್ಯ ಅಧ್ಯಕ್ಷರೆ, ರೂಲ್ 69 ತೆಗೆದುಕೊಳ್ಳಿ.

**ಅಧ್ಯಕ್ಷರು:** ಮೂರು ಮುಕ್ಕಾಲು ಗಂಟೆಯಾಗಿದೆ. ಎಷ್ಟು ಗಂಟೆಯವರೆಗೆ ಸಭೆ ನಡೆಸುವುದು?

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಮ್ಮ ಶಾಸಕಾಂಗ ಪಕ್ಷದ ಸಭೆ ಆರುವರೆ ಗಂಟೆಗೆ ಕರೆದಿದ್ದೇವೆ. ಇವತ್ತು 10 ಗಂಟೆಗೆ ನೀವು ಕರೆದಿದ್ದೀರಿ, ನಾವು ಬಂದಿದ್ದೇವೆ. ಆರು ಗಂಟೆಯವರೆಗೆ ನಡೆಸಿ ನಾವು ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಬಹಳ ಮುಖ್ಯವಾಗಿ ಶ್ರೀರಾಮರೆಡ್ಡಿಯವರು ಹೇಳಿದಂತೆ ಕೆಲವು ಪ್ರಮುಖವಾದ ವಿಷಯಗಳನ್ನು ಇವತ್ತು ನೀವು ತೆಗೆದುಕೊಂಡಿದ್ದೀರಿ. ನಿನ್ನೆ ದಿವಸ ನಿಯಮ 69ರಲ್ಲಿ ಬಂದಾಗ ಬಹಳ ಮುಖ್ಯವಾದುದು ಭೀಮಾನದಿ ಸಂಪೂರ್ಣ ಬತ್ತಿ

ಹೋಗಿದೆ. ಸುಮಾರು 40 ಕೋಟಿ ರೂಪಾಯಿ ಬೆಲೆ ಬಾಳುವಂತಹ ಬೆಳೆ ಹಾಳಾಗುತ್ತಿದೆ ಎಂದು. ಅದಕ್ಕೆ ಒಂದೊಂದಕ್ಕೆ 10 ನಿಮಿಷ ಕೊಟ್ಟು ಮುಗಿಸಿಬಿಟ್ಟು ಡಿಮ್ಯಾಂಡ್ ತೆಗೆದುಕೊಳ್ಳಬಹುದು. ಐದು ಗಂಟೆಗೆ ಡಿಮ್ಯಾಂಡ್ ಮೇಲೆ ಮಾತನಾಡಲಿ. ಅದಾದ ಮೇಲೆ ಇದನ್ನು ತೆಗೆದುಕೊಳ್ಳುತ್ತೀರಿ? ಹೇಗೆ ಇದು ನಿಮ್ಮ ವಿವೇಚನೆಗೆ ಬಿಟ್ಟಿದ್ದು ನೀವು ಹೇಗೆ ಹೇಳುತ್ತೀರಿ ಹಾಗೆ ಕೇಳುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ಮಾನ್ಯ ಅಧ್ಯಕ್ಷರೆ, ನಿಯಮ 69 ತೆಗೆದುಕೊಂಡು ಇದು ಮುಗಿದ ನಂತರ ಬೇಡಿಕೆ ತೆಗೆದುಕೊಳ್ಳೋಣ.

**ಅಧ್ಯಕ್ಷರು:** ನಾಲ್ಕು ಜನ, ಐದು ಜನ ಸಚಿವರಿದ್ದಾರೆ. ಅವರು ಅರ್ಧ ಗಂಟೆ ತೆಗೆದುಕೊಂಡರೂ ಸಮಯ ಬೇಕಾಗುತ್ತದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ತಾವು ಹೇಗೆ ಮಾಡುತ್ತೀರಿ ಹಾಗೆ. ನಾವು ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ನಾನು ಹೇಳುವುದು ಉಳಿದಂತಹ ಈ ವಿಷಯ ಮೂರು ದಿವಸಗಳಿಂದ ಮುಂದಕ್ಕೆ ಹೋಗುತ್ತಿದೆ. ನಿಯಮ 69ರ ಅಡಿಯಲ್ಲಿ ಬಂದಿರುವುದು ಇದು.

**ಅಧ್ಯಕ್ಷರು:** ಮತ್ತೆ ಇದೇ ವಿಧೇಯಕವನ್ನು ನಾಳೆಗೆ ಮುಂದೂಡಿದರೆ ಮತ್ತೆ ಬೇರೆ ಬೇರೆ ವಿಧೇಯಕಗಳು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** 15 ನಿಮಿಷ ಕೊಡಿ ಪರವಾಗಿಲ್ಲ. ಭೀಮಾ ನದಿ ಬತ್ತಿ ಹೋಗಿದೆ.

**ಶ್ರೀ ಡಿ. ಮಂಜುನಾಥ್:** ಡಿಮಾಂಡ್ಸ್ ಮೇಲೆ ಚರ್ಚೆಯಾಗಲಿ.

**ಅಧ್ಯಕ್ಷರು:** ಜಲ ಸಂಪನ್ಮೂಲ ಸಚಿವರು ಡೆಲ್ಲಿಗೆ ಹೋಗಿದ್ದಾರೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾಳೆ ಆದರೂ ಮುಂಚೆ ಇದನ್ನು ತೆಗೆದುಕೊಳ್ಳಿ. ಎಂದು ಹೇಳಿದೆ. ನಿಯಮ 69ರ ಅಡಿಯಲ್ಲಿ ಭೀಮ ನದಿ ಬತ್ತಿ ಹೋಗಿರುವ ವಿಷಯ ತೆಗೆದುಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತೆಗೆದುಕೊಳ್ಳಿ.

**ಅಧ್ಯಕ್ಷರು:** ನಿಯಮ 69ರ ಅಡಿಯಲ್ಲಿ ಈ ವಿಷಯ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನನ್ನದೇನು ಅಡ್ಡಿಯಿಲ್ಲ. ಮಂತ್ರಿಗಳು ಬರಬೇಕು. ಇವತ್ತು ಬಂದರೆ ಅಥವಾ ನಾಳೆ ಅವರು ಸದನಕ್ಕೆ ಬಂದರೆ ತೆಗೆದುಕೊಳ್ಳೋಣ.

**ಶ್ರೀಬಿ.ಎಸ್. ಯಡಿಯೂರಪ್ಪ:** ಇವತ್ತು ಯಾವುದಾದರೂ ಕಾರಣಕ್ಕೆ ಬಾರದೆ ಇದ್ದರೆ ನಾಳೆ ಇದನ್ನು ಆದ್ಯತೆ ಮೇಲೆ ತೆಗೆದುಕೊಳ್ಳಿ ಎಂದು ವಿನಂತಿ ಮಾಡುತ್ತಿದ್ದೇನೆ.

ಮೂರು ದಿವಸಗಳಿಂದ ಈ ವಿಷಯ ಬರುತ್ತಿದೆ.

**ಅಧ್ಯಕ್ಷರು:** ಅಯಿತು ತೆಗೆದುಕೊಳ್ಳೋಣ. ಇವತ್ತು ಈ ಡಿಮಾಂಡ್ ಮುಗಿಸಬೇಕು. ಅದಕ್ಕೆ ಏನೆಂದರೆ, ಆರು ಗಂಟೆ ಒಳಗೆ ಮುಗಿಸಬೇಕೆಂದರೆ ಕೆಲವರು ಮಾತನಾಡಿ ಎಲ್ಲಾ ಮಂತ್ರಿಗಳು ಉತ್ತರ ಕೊಡಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾವು ತಯಾರಾಗಿದ್ದೇವೆ. ನಾವು ಕುಳಿತು ಕೊಳ್ಳುತ್ತೇವೆ. ಇವತ್ತು ಶಾಸಕಾಂಗ ಪಕ್ಷದ ಸಭೆ ಕರೆದಿದ್ದೇವೆ ನಾವು ಇಲ್ಲಿಯೇ ಇರಬೇಕು. ಅದಕ್ಕಾಗಿ ಆರುವರೆ ಗಂಟೆಯಾದರೂ ಮುಗಿಸಿ ಇಲ್ಲಿಂದ ನೇರವಾಗಿ ಸಭೆಗಾದರೂ ಹೋಗುತ್ತೇವೆ.

**ಶ್ರೀ ಗೋವಿಂದ ಮಕ್ತಪ್ಪ ಕಾರಜೋಳ:** ಸನ್ಮಾನ್ಯ ಅಧ್ಯಕ್ಷರೆ, ಭೀಮ ನದಿ ವಿಷಯ ಅಂತರರಾಜ್ಯ ನೀರಿನ ವಾದ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ನಿಮಯ 69 ಮೂರು ದಿವಸಗಳಿಂದ ಮುಂದಕ್ಕೆ ಹೋಗುತ್ತಿದೆ.

**ಶ್ರೀ ಗೋವಿಂದ ಮಕ್ತಪ್ಪ ಕಾರಜೋಳ:** ಇದಕ್ಕೆ ಜಲ ಸಂಪನ್ಮೂಲ ಸಚಿವರು ಬೇಕಾಗಿಲ್ಲ. ಕಾನೂನು ಸಚಿವರು ಬಂದು ಹೇಳಿಕೆ ಕೊಟ್ಟರೂ ಆಗುತ್ತದೆ. ಭೀಮ ನದಿ ವಿವಾದ ಇದು ಅಂತರ ರಾಜ್ಯ ವಿವಾದ ಇದಕ್ಕೆ ಜಲ ಸಂಪನ್ಮೂಲ ಸಚಿವರು ಬೇಕಾಗಿಲ್ಲ. ಕಾನೂನು ಸಚಿವರಿಗೆ ಕರೆಸಿ ಹೇಳಿಸಿದರೂ ಆಗುತ್ತದೆ. ಕಾನೂನು ಸಚಿವರಿಗಾದರೂ ಬರಲಿಕ್ಕೆ ಹೇಳಿ.

**ಅಧ್ಯಕ್ಷರು:** ಅಯಿತು ಇವತ್ತು ಡಿಮಾಂಡ್ಸ್ ಮುಗಿಸಬೆಕು. ಆರು-ಆರೂವರೆ ಗಂಟೆ ಒಳಗಡೆ ಮುಗಿಸಬೇಕು. ಎಲ್ಲ ಮಂತ್ರಿಗಳೂ ಉತ್ತರ ಕೊಡಬೇಕು. ಆದ್ದರಿಂದ ಸ್ವಲ್ಪ ಬೇಗ ಬೇಗ ಮುಗಿಸಿಬಿಡಿ. ಯಾರಿಗೂ ಮಾತನಾಡುವುದಕ್ಕೆ ಅವಕಾಶ ಇಲ್ಲ. ನಾಳೆಯಿಂದ ಯಾವ ಯಾವ ರಾಜಕೀಯ ಪಕ್ಷಕ್ಕೆ ಎಷ್ಟೆಷ್ಟು ಗಂಟೆ ಕೊಡಬೇಕೆಂದು ತೀರ್ಮಾನ ಮಾಡುತ್ತೇನೆ. ಅದರ ಪ್ರಕಾರ ನಾನು ಎಲ್ಲರಿಗೂ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ಎಷ್ಟೆಷ್ಟು ಬೇಕು ಅಷ್ಟು ಮಾತನಾಡಿ. ಇದನ್ನು ಬೇಗ ಬೇಗ ಡಿಮಾಂಡ್ ಪಾಸ್ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಶ್ರೀರಾಮರೆಡ್ಡಿಯವರೇ 15 ನಿಮಿಷಗಳಲ್ಲಿ ಮುಗಿಸಬೇಕು. ಅಲ್ಲದಿದ್ದರೆ ಬೇರೆ ಸದಸ್ಯರು ಮಾತನಾಡಬೇಕು. ಮಂತ್ರಿಗಳು ಉತ್ತರ ಕೊಡಬೇಕು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ಮಾನ್ಯ ಅಧ್ಯಕ್ಷರೆ, ನೀವು ಬೇಡಿಕೆಗಳು ಎಷ್ಟು ಹಾಕಿದ್ದೀರಿ ಹೇಳಿ ಇವತ್ತು ಐದು ಬೇಡಿಕೆಗಳನ್ನು ಹಾಕಿದ್ದೀರಿ. ನಾಲ್ಕು ಬೇಡಿಕೆಗಳು ಇವೆ.